**ಸಾಕ್ಷಿಗೆ ದಿನಾಂಕಃ25-06-2025 ರಂದು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**:: ಮುಂದುವರೆದ ಪಾಟೀ ಸವಾಲು :: ಪ್ರತಿವಾದಿಗಳ ಪರ ಶ್ರೀ. SNM ವಕೀಲರಿಂದ ::**

ನನ್ನ ಜಮೀನಿನಲ್ಲಿ ನಾನು ಅಡಿಕೆ ತೋಟವನ್ನು ಮಾಡಿರುತ್ತೇನೆ ಎಂದರೆ ಸರಿ. ನನ್ನ ತೋಟದ ಪಶ್ಚಿಮಕ್ಕೆ ಬಿ ಕಾಲೋನಿ ಇರುತ್ತದೆ. ಬಿ ಕಾಲೋನಿಯಿಂದ ಎಂ ಸಿ ಹಳ್ಳಿಯವರೆಗೂ ಒಂದು ರಸ್ತೆ ಇರುತ್ತದೆ ಎಂದರೆ ಸರಿಯಲ್ಲ. ನನ್ನ ಜಮೀನಿನ ಉತ್ತರಕ್ಕೆ ಒಂದು ಸರ್ಕಾರಿ ಗುಡ್ಡ ಇರುತ್ತದೆ. ಸದರಿ ಗುಡ್ಡದ ದಕ್ಷಿಣಕ್ಕೆ ಇರುವ ಮನೆಗಳು ಪ್ರತಿವಾದಿಗಳದ್ದಾಗಿರುತ್ತವೆ.

ಸಾಕ್ಷಿಗೆ ಪೋಟೋಗಳನ್ನು ತೋರಿಸಲಾಗಿ ಅದರಲ್ಲಿ ಇರುವ ಗುಡ್ಡ ಹಾಗೂ ಮನೆಗಳು ಸಾಕ್ಷಿ ಈಗ ಹೇಳುತ್ತಿರುವ ಮನೆಗಳು ಆಗಿರುತ್ತದೆ ಎಂದು ನೋಡಿ ಒಪ್ಪಿದ ಕಾರಣ ಅವುಗಳನ್ನು ಕ್ರಮವಾಗಿ ನಿಡಿ.3 ರಿಂದ 6 ಎಂದು ಗುರುತಿಸಲಾಯಿತು.

ನನ್ನ ಜಮೀನಿನ ನೈರುತ್ಯ ದಿಕ್ಕಿಗೆ ಒಂದು ಟಿಸಿ ಯನ್ನು ಅಳವಡಿಸಿದ್ದು ಮತ್ತು ಅಲ್ಲಿ ಇರುವ ಒಂದು ಮರಕ್ಕೆ Electric starter ಅನ್ನು ಸಹ ಅಳವಡಿಸಲಾಗಿರುತ್ತದೆ ಎಂದರೆ ಸರಿ. ಸಾಕ್ಷಿಗೆ ಒಂದು ಪೋಟೋವನ್ನು ತೋರಿಸಲಾರಿ ಅದನ್ನು ಸಾಕ್ಷಿ ನೋಡಿ ಗುರುತಿಸಿದ ಕಾರಣ ಅದನ್ನು ನಿಡಿ7 ಎಂದು ಗುರುತಿಸಲಾಯಿತು. ಸದರಿ ಟಿಸಿಯ ಪಕ್ಕದಲ್ಲಿ ಉತ್ತರ ದಕ್ಷಿಣವಾಗಿ ಹೋಗುವ ರಸ್ತೆಯು ಪ್ರತಿವಾದಿಗಳು ದೌರ್ಜನ್ಯದಿಂದ ಮಾಡಿಕೊಂಡಿರುತ್ತಾರೆ. ಸದರಿ ರಸ್ತೆಯು ಕರಕುಚ್ಚಿಗೆ ಹೋಗಿ ನಂತರ ಹೆದ್ದಾರಿಗೆ ಸೇರುತ್ತದೆ ಎಂದರೆ ಸಾಕ್ಷಿಯು ಸದರಿ ರಸ್ತೆಯು ಗುಡ್ಡಕ್ಕೆ ಹೋಗುತ್ತದೆ ಎಂದು ನುಡಿದಿರುತ್ತಾರೆ. ನನ್ನ ಜಮೀನಿನ ಉತ್ತರದಲ್ಲಿ ಇರುವ ರಸ್ತೆಯು ನಕಾಶೆಯಲ್ಲಿ ಕಂಡ ದಾರಿಯಾಗಿದ್ದು ಅದು ರಂಗೇನಹಳ್ಳಿಯಿಂದ ಎಂ ಸಿ ಹಳ್ಳಿಗೆ ಹೋಗುವ ರಸ್ತೆ ಆಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಜಾಗದಲ್ಲಿ ಸುಮಾರು 50-60 ಮನೆಗಳು ಇರುತ್ತವೆ ಎಂದರೆ ಸಾಕ್ಷಿಯು ಕೇವಲ 10-20 ಶೆಡ್ ಗಳು ಇರುತ್ತವೆ ಎಂದು ನುಡಿಯುತ್ತಾರೆ.

ನನಗೆ ಸರ್ಕಾರದಿಂದ ಜಮೀನು 2016-17 ನೇ ಸಾಲಿನಲ್ಲಿ ಮಂಜೂರು ಆಗಿರುತ್ತದೆ. ಮಂಜೂರಾತಿಯಾದ ನಂತರದಲ್ಲಿ ನಾನು ನನ್ನ ಜಮೀನಿಗೆ ಹದ್ದುಬಸ್ತು ಮಾಡಿಸಿರುವುದಿಲ್ಲ. ನನ್ನ ಜಮೀನಿನ ಉತ್ತರಕ್ಕೆ ಉತ್ತರ-ದಕ್ಷಿಣವಾಗಿ ರಸ್ತೆ ಇದ್ದು, ಸುಮಾರು ಮನೆಗಳು ಪೂರ್ವ

ಹಾಗೂ ಪಶ್ಚಿಮ ಮುಖವಾಗಿ ಕಟ್ಟಿಕೊಂಡಿರುತ್ತಾರೆ ಎಂದರೆ ಸಾಕ್ಷಿಯು ಸಿಕ್ಕಸಿಕ್ಕಲ್ಲಿ ಕಟ್ಟಿಕೊಂಡಿರುತ್ತಾರೆ ಎಂದು ನುಡಿದಿರುತ್ತಾರೆ. ಸದರಿ ಮನೆಗಳಿಗೆ ಅದರ ವಾಸಿಗಳು ವಿದ್ಯುತ್ ಅನ್ನು ಸಹ ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತೋಟದ ಉತ್ತರಕ್ಕೆ ಗುಡ್ಡದವರೆಗೂ ಸುಮಾರು 10 ಎಕರೆ ಸರ್ಕಾರಿ ಜಾಗ ಇರುತ್ತದೆ ಎಂದರೆ ಸರಿ.

ನಾನು ಇತ್ತೀಚೆಗೆ ಅಸಲು ದಾವಾ 315/2024 ರಲ್ಲಿ ಪುಟ್ಟಸ್ವಾಮಿ, ಮುರುಗೇಶ್ ಮತ್ತು ಇತರರ ವಿರುದ್ದ ಮತ್ತೊಂದು ದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿ. ಸದರಿ ದಾವೆಯನ್ನು ಯರೆಬೈಲು ಗ್ರಾಮದ ಸರ್ವೇ ನಂಬರ್ 3 ರಲ್ಲಿನ ಜಾಗಕ್ಕೆ ಸಂಬಂಧಪಟ್ಟಂತೆ ಹೂಡಿರುತ್ತೇನೆ. ಸದರಿ ಜಾಗದ ವಿಸ್ತೀರ್ಣ ಹಾಗೂ ಚೆಕ್ಕುಬಂದಿ ನನಗೆ ನೆನಪಿಲ್ಲ. ನನ್ನ ಸ್ವಂತ ಊರು ಬಾವಿಕೆರೆ ಆಗಿರುತ್ತದೆ. ನನ್ನ ಪ್ರಕಾರ ಆಸ್ತಿ ಮತ್ತು ಜಮೀನು ಇಲ್ಲದ ವ್ಯಕ್ತಿಗಳು ಸುಮಾರು ಜನ ಇರುತ್ತಾರೆ ಎಂದರೆ ಇರಬಹುದು. ನಾನು ಪ್ರತಿವಾದಿಗಳ ವಿರುದ್ದ ದಾವಾ ಹೂಡಿದ ನಂತರದಲ್ಲಿ ಪೊಲೀಸರಿಗೆ ಒಂದು ದೂರನ್ನು ನೀಡಿರುತ್ತೇನೆ ಎಂದರೆ ಸರಿ. ನನ್ನ ದೂರಿನ ಆಧಾರದಲ್ಲಿ ಸ್ಥಳಕ್ಕೆ ಪೊಲೀಸರು ಮತ್ತು ರಾಜಸ್ವ ನೀರಿಕ್ಷಕರು ಬಂದಿರುತ್ತಾರೆ ಎಂದರೆ ಸರಿ. ಸದರಿ ಸಮಯದಲ್ಲಿ ಪೊಲೀಸರು ಮತ್ತು ರಾಜಸ್ವ ನೀರಿಕ್ಷಕರು ಪ್ರತಿವಾದಿಗಳು ಅವರ ಜಾಗದಲ್ಲಿ ಮನೆ ಕಟ್ಟಿಕೊಂಡಿರುತ್ತಾರೆ ಎಂದು ತಿಳಿಸಿರುತ್ತಾರೆ ಎಂದರೆ ಸರಿಯಲ್ಲ.

ದಾವಾ ಆಸ್ತಿಗೆ ಸಂಬಂಧಪಟ್ಟ ಸಾಗುವಳಿ ಚೀಟಿಯ ಜೊತೆ ಯಾವುದೇ ನಕ್ಷೆಯನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ದಾವೆ ಹೂಡುವ ಪೂರ್ವದಲ್ಲಿ ಪ್ರತಿವಾದಿಗಳ ವಿರುದ್ದ ನಾನು ತರೀಕೆರೆ ಪೊಲೀಸ್ ಠಾಣೆಯಲ್ಲಿ ಒಂದು ದೂರನ್ನು ನೀಡಿರುತ್ತೇನೆ ಎಂದರೆ ಸರಿ. ಈ ದಾವೆಯನ್ನು ಪ್ರತಿವಾದಿಗಳು ಅಕ್ರಮವಾಗಿ ಕಟ್ಟಿರುತ್ತಾರೆ ಎಂದು ಹೇಳುತ್ತಿರುವ ಜಾಗವನ್ನು ಬಿಡಿಸಿಕೊಡುವಂತೆ ಹೂಡಿರುತ್ತೇನೆ ಎಂದರೆ ಸಾಕ್ಷಿಯು ದಾವಾ ಹೂಡಿದ ನಂತರದಲ್ಲಿ ಆ ರೀತಿ ಮನೆಗಳನ್ನು ಕಟ್ಟಿಕೊಂಡಿರುತ್ತಾರೆ ಎಂದು ನುಡಿದಿರುತ್ತಾರೆ. ದಾವಾ ಹೂಡುವ ಪೂರ್ವದಲ್ಲಿಯೇ ಪ್ರತಿವಾದಿಗಳು ಮನೆಗಳನ್ನು ಕಟ್ಟಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಜಮೀನಿನ ದಕ್ಷಿಣಕ್ಕೆ ಗುಡ್ಡ ಇರುವುದನ್ನು ತೋರಿಸಲು ನನ್ನ ಬಳಿ ಯಾವುದೇ ದಾಖಲಾತಿ ಇರುವುದಿಲ್ಲ. ನಾನು ದಾವಾ ಶೆಡ್ಯೂಲ್ ಸ್ವತ್ತಿಗೆ ತೋರಿಸಿರುವ ಚೆಕ್ಕುಬಂದಿಯನ್ನು ದಾವೆಗೋಸ್ಕರ ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ನನಗೆ ಮಂಜೂರಾದ ಜಾಗದಲ್ಲಿ ತೋಟ ಮಾಡಿಕೊಂಡು ನಾನು ಸ್ವಾಧೀನದಲ್ಲಿ ಇರುತ್ತೇನೆ ಎಂದರೆ ಸಾಕ್ಷಿಯು ನಾನು

ಎರಡು ಗ್ರಾಮದಲ್ಲಿ ಇರುವ ನನ್ನ ಜಾಗದಲ್ಲಿ ಸ್ವಾಧೀನದಲ್ಲಿ ಇರುತ್ತೇನೆ ಎಂದು ನುಡಿಯುತ್ತಾರೆ. ಪ್ರತಿವಾದಿಗಳು ನನ್ನ ಜಾಗದಲ್ಲಿ ಯಾವುದೇ ಮನೆಗಳನ್ನು ಕಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ನಾನೇ ಪ್ರತಿವಾದಿಗಳಿಗೆ ಕಿರುಕುಳ ನೀಡುತ್ತಾ ಬಂದಿರುತ್ತೇನೆ ಎಂದರೆ ಸರಿಯಲ್ಲ.

**:: ಮರು ವಿಚಾರಣೆ ಇಲ್ಲ ::**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸ ಇ ಎ ಒ

sd/-

ಸಿ.ಜೆ ಮತ್ತು ಹೆ. ಜೆ.ಎಂ.ಎಫ್.ಸಿ ನ್ಯಾಃ

ತರೀಕೆರೆ.

ಸಾಕ್ಷಿಯ ಸಹಿ: